O.S. ನಂಬರ: 23/2018  Clubbed with OS No.101/2018.
ಪಿ. ಡಬ್ಲ್ಯೂ: 1

ದಿ: 23-11-2024ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲು:</u> ಪ್ರತಿವಾದಿಯ ಪರ ವಕೀಲರಾದ ಶ್ರೀ ಡಿ.ಕೆ.ಜೆ ಇವರಿಂದ:

ನೀವು ವರ್ಗಾವಣೆಯಾಗಿ ನಾಡಮಸ್ಕೇರಿಗೆ ಬಂದಾಗ ಶಾಲಾ ಹೆಡ್ ಮಾಸ್ಟರ್ ಯಾರು ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನೀವು ನಾಡಮಸ್ಕೇರಿ ಹೈಸ್ಕೂಲಿಗೆ ಬಂದಾಗ ಶಾಮಲಾ ಟಿ. ಎಂದು ಹೆಡ್ ಮಾಸ್ಟರ್ ಇದ್ದರು ಎಂದರೆ ಗೊತ್ತಿರುವುದಿಲ್ಲ. ಅದೇ ಹೆಡ್ ಮಾಸ್ಟರ್ ಶಾಮಲಾ ಟಿ ಇವರ ಜೊತೆಗೆ ನಿಮ್ಮ ಮದುವೆಯಾಗಿರುತ್ತದೆ ಎಂದರೆ ಸರಿ. ನೀವು ಜವಾಬ್ದಾರಿ ಶಿಕ್ಷಕರಾಗಿ ಕೆಲಸ ಮಾಡಿ, ಶಾಮಲಾ ಟಿ ಇವರು ಯಾರು ಎಂದು ಗೊತ್ತಿಲ್ಲ ಎಂದು ಬುದ್ಧ್ಯಾಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನೀವು ಹೇಳುವಂತಹ ಶಾಮಲಾ ಟಿ. ಇವರು ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪತ್ನಿಯಾದ ಶಾಮಲಾ ಟಿ. ಅನ್ನುವವರು ಯಾವ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೆಡ್ ಮಾಸ್ಟರ್ ಆಗಿದ್ದರು ಎಂದು ನುಡಿಯುತ್ತಾರೆ. ಹೆಡ್ ಮಾಸ್ಟರ್ ಹುದ್ದೆಯಿಂದ ಅವರಿಗೆ ಬಡ್ತಿ ಆಗುತ್ತಾ ಹೋಗಿರುತ್ತದೆ ಎಂದರೆ ಸರಿ. ನಿಮ್ಮ ಪತ್ನಿ 2015-16ನೇ ಸಾಲಿನಲ್ಲಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ

ಗೊತ್ತಿರುವುದಿಲ್ಲ. ಅವರು 2016-17 ನೇ ಸಾಲಿನಲ್ಲಿ ಕುಮಟಾದಲ್ಲಿ ಅಕ್ಷರ ದಾಸೋಹದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. 2016-17ನೇ ಸಾಲಿನಲ್ಲಿ ಕುಮಟಾದಲ್ಲಿ ಅಕ್ಷರ ದಾಸೋಹದಲ್ಲಿ ನಿಮ್ಮ ಪತ್ನಿ ಕೆಲಸ ಮಾಡುತ್ತಿರುವಾಗ ಕೆಲಸಗಾರರು ಧರಿಸುವಂತಹ APRON ಬಗ್ಗೆ ಅವರ ವಿರುದ್ಧ Misappropriation ಬಗ್ಗೆ ಆಪಾದನೆ ಇರುತ್ತದೆ ಎಂದರೆ ಸರಿಯಲ್ಲ. ಜಿಲ್ಲಾ ಪಂಚಾಯತ ನಲ್ಲಿ ಸದರಿ ಆಪಾದನೆ ಬಗ್ಗೆ ವಿಚಾರಣೆಯಾಗಿರುತ್ತದೆ ಎಂದರೆ ಗೊತ್ತಿರುವುದಿಲ್ಲ. ಸದರಿ ಆಪಾದನೆಯ ವಿಚಾರಣೆಗೊಸ್ಕರ ಓಡಾಡಲು ಹಣ ಬೇಕಾಗಿದ್ದರಿಂದ ಪ್ರತಿವಾದಿ ಶಾಲೆಯಿಂದ ರೂ.5 ಲಕ್ಷ ಹಣವನ್ನು ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆ ಸಮಯದಿಲ್ಲಿ ಪ್ರತಿವಾದಿ ಶಾಲೆಯು ಅಷ್ಟು ದೂಡ್ಡ ಮೊತ್ತವನ್ನು ಕೊಡಲು ಆಗುವುದಿಲ್ಲ ಎಂದು ತಮ್ಮ ಅಸಹಾಯಕತೆಯನ್ನು ಹೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಹಣದ ಸಹಾಯ ಮಾಡಿರುವುದಿಲ್ಲ ಎನ್ನುವ ಒಂದೇ ಉದ್ದೇಶದಿಂದ ಪ್ರತಿವಾದಿಯ ಶಾಲೆಯ ವಿರುದ್ಧ ಘರ್ಷಣೆಗೆ ಇಳಿದಿರುತ್ತೀರಿ ಎಂದರೆ ಸರಿಯಲ್ಲ.

2. 2017-18 ರವರೆಗೂ ನಿಮ್ಮ ಹಾಗೂ ಪ್ರತಿವಾದಿಯ ವಿದ್ಯಾ ಸಂಸ್ಥೆಯ ನಡುವೆ ಒಳ್ಳೆಯ ಬಾಂಧವ್ಯ ಇತ್ತು, ಆ ನಂತರ ಅದು ಕೆಟ್ಟಿರುತ್ತದೆ ಎಂದರೆ ಸಾಕ್ಷಿಯು ನನಗೆ ಸದರಿ ವಿದ್ಯಾಸಂಸ್ಥೆ ಗೊತ್ತಿರುವುದೇ ಇಲ್ಲ ಎಂದು ನುಡಿಯುತ್ತಾರೆ. ಅದೇ ಕಾರಣಕ್ಕಾಗಿ 2018 ರಲ್ಲಿ ಪ್ರತಿವಾದಿ ವಿದ್ಯಾ ಸಂಸ್ಥೆ ವಿರುದ್ದ ದೂರು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. 1994 ರಿಂದ ಪ್ರತಿವಾದಿ ವಿದ್ಯಾ ಸಂಸ್ಥೆಯು ಕಬ್ಜೆಯಲ್ಲಿ ಇದ್ದು, ಶಾಲೆ ನಡೆಸುತ್ತಿದ್ದರೂ ಸಹ ನೀವು

2018 ಏಪ್ರಿಲ್ ತಿಂಗಳಲ್ಲಿ ಒಂದು ಕಾಲ್ಪನಿಕವಾಗಿ ದಾವಾ ಕಾರಣ ಸೃಷ್ಟಿ ಮಾಡಿಕೊಂಡು ದಾವೆಯನ್ನು ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಇದೇ ಸಮಯದಲ್ಲಿ ಅಂದರೆ 2019 ನೇ ಸಾಲಿನಲ್ಲಿ ನಿಮ್ಮ ಪತ್ನಿಯು ಅಂಕೋಲಾಕ್ಕೆ ಬಿ ಇ ಓ ಆಗಿ ಬಡ್ತಿ ಹೊಂದಿರುತ್ತಾರೆ ಎಂದರೆ ಸರಿ. ಅದೇ ಕಾಲದಲ್ಲಿ ನೀವು ಹಾಗೂ ನಿಮ್ಮ ಪತ್ನಿಯು ಸೇರಿಕೊಂಡು ವಿದ್ಯಾ ಸಂಸ್ಥೆ ಮುಚ್ಚುವತನಕ ಒಂದಲ್ಲ ಒಂದು ತೊಂದರೆಯನ್ನು ಕೊಡುತ್ತಾ ಬಂದಿರುತ್ತೀರಿ ಎಂದರೆ ಸರಿಯಲ್ಲ. ನೀವು ನಿಮ್ಮ ದಾವೆಯಲ್ಲಿ ದಿಃ09-02-2018 ರಲ್ಲಿ ಪ್ರತಿವಾದಿ ಶಾಲೆಯು ನಿಮ್ಮ ಜಮೀನಿನಲ್ಲಿ ಅತಿಕ್ರಮಣ ಪ್ರವೇಶ ಮಾಡಿರುತ್ತದೆ ಎಂದು ಸುಳ್ಳು ಕಾಣಿಸಿರುತ್ತೀರಿ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಆದೇಶ ಪಡೆದುಕೊಂಡು ಅದರ ಆಧಾರದ ಮೇಲೆ ಶಿಕ್ಷಣ ಆಯುಕ್ತರು ಕಮೀಷನರ್ ಇವರಿಗೆ ಪ್ರತಿವಾದಿ ಸಂಸ್ಥೆಯು ಬೇಕಾಯ್ದೆಶೀರ್ ಆಗಿ ದಾವಾ ಆಸ್ತಿಯಲ್ಲಿ ಕಬ್ಜೆಯನ್ನು ಹೊಂದಿರುತ್ತಾರೆ ಎಂದು ಅರ್ಜಿಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿ. ನಿಮಗೆ ಸಹಾಯ ಮಾಡಲು ಶಿಕ್ಷಣನಾತೆಯಿಂದ ಪ್ರತಿವಾದಿ ಶಾಲೆಯನ್ನು ನವೀಕರಣ ಮಾಡಬಾರದು ಹಾಗೂ ರದ್ದು ಮಾಡಲು ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಶಾಲೆ ನಡೆಯುವ ಸ್ಥಿತಿಯಲ್ಲಿ ಇದ್ದರೂ ಸಹ ಮಧ್ಯಂತರ ಆದೇಶವನ್ನು ಪಡೆದುಕೊಂಡು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತೀರಿ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಮಗೆ ಸಹಾಯ ಮಾಡಲು ಶಿಕ್ಷಣಾಧಿಕಾರಿಯಾದ ನಿಮ್ಮ ಪತ್ನಿಯು ಆಡಳಿತಮಂಡಳಿಯನ್ನು ರದ್ದು ಮಾಡಿ, ಆಡಳಿತಗಾರರನ್ನು ಎಂದು ನೇಮಕ ಮಾಡಬೇಕು ಎಂದು ಶಿಪಾರಸ್ಸನ್ನು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

3. ನಿಮ್ಮ ಪತ್ನಿಯ ವಿರುದ್ಧ ವ್ಯತಿರೀಕ್ತ ಆದೇಶ ಮಾಡಿದ್ದರಿಂದ ಸಿಬ್ಬಂದಿ ಹಾಗೂ ಊರಿನ ಜನರು ಪ್ರತಿಭಟನೆ ಮಾಡಿದ್ದು, ದಿನಪತ್ರಿಕೆಯಲ್ಲಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ಅವರ ಮೇಲೆ ವಿಚಾರಣೆ ಮಾಡಲಾಗಿ ಅವರು ಸಸ್ಪೆಂಡ್ ಆಗಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಇವತ್ತಿನಮಟ್ಟಿಗೆ ನಿಮ್ಮ ಪತ್ನಿ ಸೇವೆಯಲ್ಲಿ ಇರುತ್ತಾರೊ ಅಥವಾ ನಿವೃತ್ತಿ ಹೊಂದಿರುತ್ತಾರೊ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಸ್ಪೆಂಡ್ ಆದ ನಂತರ ಮತ್ತೆ ಸೇವೆಗೆ ಸೇರಿರುತ್ತಾರೋ ಅಥವಾ ಇಲ್ಲವೂ ಎಂದರೆ ನನಗೆ ಗೊತ್ತಿರುವುದಿಲ್ಲ. ಇವತ್ತಿನಮಟ್ಟಿಗೆ ನೀವು ಹಾಗೂ ನಿಮ್ಮ ಪತ್ನಿ ಜೊತೆ ಇರುತ್ತಿರೋ ಅಥವಾ ಬೇರೆ ಇರುತ್ತೀರೋ ಎಂದರೆ ಸಾಕ್ಷಿಯು ಅವರು ಅವರ ತಾಯಿ ಮನೆಯಲ್ಲಿ ವಾಸ ಮಾಡುತ್ತಿದ್ದು, ನಾನು ಬೇರೆಯಾಗಿ ವಾಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಪತ್ನಿ ಅವ್ಯವಹಾರ ಮಾಡಿದ್ದರಿಂದ ಹಾಗೂ ಅಧಿಕಾರದ ದುರುಪಯೋಗ ಪಡಿಸಿಕೊಂಡಿದ್ದರಿಂದ ಬಿ ಇ ಓ ದಿಂದ ಹಿಂಬಡ್ತಿ ಆಗಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಆ ಕಾರಣದಿಂದ ಇಂದಿನವರೆಗೂ ಸಹ ಅವರು ಸೇವೆಗೆ ಸೇರಿರುವುದಿಲ್ಲ ಎಂದರೆ ಗೊತ್ತಿರುವುದಿಲ್ಲ. 1994-95 ರಿಂದ ಪ್ರತಿವಾದಿ ಶಾಲೆಯು ಚಾಲ್ತಿಯಲ್ಲಿ ಇದ್ದರೂ ಸಹ ನೀವು ನಿಮ್ಮ ದಾವೆಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ 2018 ರಂದು ದಾವಾ ಆಸ್ತಿಯಲ್ಲಿ ಅತಿಕ್ರಮಣ ಪ್ರವೇಶ ಮಾಡಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-26 ಮತ್ತು 27 ರಲ್ಲಿ ಪ್ರತಿವಾದಿ ಶಾಲೆಗೆ 1994 ರಿಂದ ಶಾಲೆ ನಡೆಸಲು ಅನುಮತಿ ಕೊಟ್ಟಿರುತ್ತಾರೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಶಿಕ್ಷಣ ಆಯುಕ್ತರು, ಧಾರವಾಡ ಇವರ ಮುಂದೆ ಸಲ್ಲಿಸಿದ

ಮೇಲ್ಮನವಿಯಲ್ಲಿ ನಮ್ಮ ತಂದೆಯವರು ಶಾಲೆಯನ್ನು ಕಟ್ಟಿರುತ್ತಾರೆ ಎಂದು ನಮೂದು ಮಾಡಿರುತ್ತೀರಿ ಎಂದರೆ ಸಾಕ್ಷಿಯು ಕಟ್ಟಡವನ್ನು ನಮ್ಮ ತಂದೆಯವರು ಕಟ್ಟಿ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎಂ.ಎ ನಂ.8/2019 ರಲ್ಲಿ ಸಹ ನಿಮ್ಮ ತಂದೆಯವರು ಶಾಲೆಯವರು ಕಟ್ಟಿಕೊಂಡಿರುತ್ತಾರೆ ಎಂದು ಹೇಳಿಕೊಂಡಿರುತ್ತೀರಿ ಎಂದರೆ ಸರಿ. ನಿಮ್ಮ ತಂದೆಯವರು ದಿಃ03-06-1996 ರಲ್ಲಿ ತೀರಿಕೊಳ್ಳುವ ಪೂರ್ವದಲ್ಲಿ ನೀವು ಹೇಳುವ ಪ್ರಕಾರ ಕಟ್ಟಡವನ್ನು ಕಟ್ಟಿದ್ದರೆ ಅವರು ತೀರಿಕೊಳ್ಳುವ ಸಮಯದಲ್ಲಿ ಶಾಲೆಯು ಅಸ್ತಿತ್ವದಲ್ಲಿ ಇತ್ತು ಎಂದರೆ ಸಾಕ್ಷಿಯು ನಮ್ಮ ತಂದೆಯವರು ಶಾಲೆಯನ್ನು ಕಟ್ಟಿರುವುದಿಲ್ಲ ಫಾರ್ಮ ಹೌಸ್ ಕಟ್ಟಿ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಫಾರ್ಮ ಹೌಸ್ ಇತ್ತು ಎಂದು ನಿಮ್ಮ ದಾವೆಯಲ್ಲಾಗಲಿ ಅಥವಾ ಪ್ರಮಾಣ ಪತ್ರದಲ್ಲಾಗಲಿ ಎಲ್ಲಿಯೂ ಸಹ ಹೇಳಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.